

# ಮುಳುಗುವ ಕೋರ

■ ನಾಗೇಶ್‌ಕುಮಾರ್ ಸಿ.ಎಸ್.

## ‘ಅಂಚನಾ ನೀರಲ್ಲಿ ಮುಳುಗಿದ್ದೇಕೆ?’

ವಿನಯನಗರದ ನ್ಯೂ ಗ್ಲೋಬಲ್ ಇನ್ಶೂರೆನ್ಸ್ ಕಂಪನಿಯ ಸುಸಜ್ಜಿತ ಹವಾನಿಯಂತ್ರಿತ ಕಚೇರಿಯಲ್ಲಿ ಅಂದು ಬೆಳಿಗ್ಗೆ ಒಂಬತ್ತಕ್ಕೇ ಬಿಸಿಯೇರಿದ ವಾತಾವರಣವಿತ್ತು. ತನ್ನ ಟೇಬಲ್ ಹಿಂದೆ ಕುಳಿತು ಎದುರಿಗಿದ್ದ ಪತ್ತೇದಾರ ಕೀರ್ತಿಮಾನ್ ಕಡೆಗೆ ಹುಬ್ಬುಗಂಟಿಕ್ಕಿ ಅಂದಿನ ದಿನಪತ್ರಿಕೆಯಲ್ಲಿ ಮಡಿಚಿದ್ದ ಸುದ್ದಿಯನ್ನು ಟೇಬಲ್ ಮೇಲೆ ಬಡಿದು ಸಿಡಿದರು, ಉದ್ರಿಕ್ತ ಮುಖದ ಭೀಮರಾವ್.

‘ನಾನೆಷ್ಟು ಬಡ್ಕೊಂಡರೂ ಕೇಳುವುದಿಲ್ಲಯ್ಯಾ ಈ ಆಫೀಸಿನಲ್ಲಿ.., ಐದು ಕೋಟಿ ರೂಪಾಯಿ ವಿಮಾ ಪಾಲಿಸಿ ಯಾರಾದರೂ ಸುಮ್ಮನೇ ಮಾರುತ್ತಾರೆಯೆ? ಅದೂ ಅದನ್ನು ಕೊಂಡವರು ಇಷ್ಟು ಬೇಗ ಸಾಯುವಂತಾದರೆ? ಈಗ ನೋಡು ಯಾರ ತಲೆಗೆ ಬಂತು?’

ಅವರ ಈ ಸಿಟ್ಟಿನ ಗುಡುಗುವ ದನಿ ಕೀರ್ತಿಮಾನ್‌ಗೆ ಅಪರೂಪವೇನಲ್ಲ. ಭೀಮರಾವ್ ಪ್ರಕಾರ ಪಾಲಿಸಿ ಮಾರುವುದೇ ಈ ವಿಮಾ ಕಂಪನಿಯ ದೊಡ್ಡ ಅಪರಾಧ. ಏಕೆಂದರೆ ಅದರಿಂದ ಪಾಲಿಸಿದಾರರ ಕ್ಲೈಮ್ಸ್ ಬರುತ್ತಲ್ಲಾ? ಅವರೇ ಆ ಕ್ಲೈಮ್ಸ್ ವಿಭಾಗದ ಮುಖ್ಯಸ್ಥ. ಜನ್ಮತಃ ಮಹಾ ಜಿಪುಣ. ಒಂದು ಚಿಕ್ಕಾಸೂ ಕಂಪನಿಯಿಂದ ವ್ಯಯವಾಗಬಾರದು ಎನ್ನುವ ಓಬೀರಾಯನ ಕಾಲದಲ್ಲಿ ಕಲಿತ ಸಿದ್ಧಾಂತವನ್ನೇ ಪ್ರತಿಪಾದಿಸುತ್ತಾ ಇಪ್ಪತ್ತೈದು ವರ್ಷ ಸರ್ವೀಸ್ ಮಾಡಿದ್ದವರು. ಕೀರ್ತಿಮಾನ್ ಇಲ್ಲಿಗೆ ನಾಲ್ಕು ವರ್ಷದ ಕೆಳಗೆ ಕೆಲಸಕ್ಕೆ ಸೇರಿದಾಗಿನಿಂದ ಅವರನ್ನು ಗಮನಿಸುತ್ತಲೇ ಇದ್ದ. ಪ್ರತಿ ಕ್ಲೈಮ್ ಬಂದಾಗಲೂ ಅವರದು ಏನಾದರೂ ಒಂದು ತಕರಾರು. ಹಣ ಪಾವತಿ ತಪ್ಪಿಸಿಕೊಳ್ಳುವ ಹುನ್ನಾರ. ಅದಕ್ಕೆ ತನ್ನ ಕೈ ಕೆಳಗೆ ದುಡಿಯುವ ಕೀರ್ತಿಮಾನ್ ಯಾವುದಾದರೂ ಪತ್ತೇದಾರಿ ಚಮತ್ಕಾರ ಮಾಡಬೇಕೆಂದು ಬಯಸುವರು. ಕೀರ್ತಿಮಾನ್ ಒಬ್ಬ ನೀಳ ಕೂದಲಿನ ಸದೃಢ ಮೈಕಟ್ಟಿನ ಸ್ಫುರದ್ರೂಪಿ ಯುವಕ. ಅವನಿಗಿನ್ನೂ ಈ ನೌಕರಿಯಲ್ಲಿ ಅನುಭವ ಕಡಿಮೆ ಎಂದವರ ಅಸಮಾಧಾನ.

ಕೀರ್ತಿಮಾನ್ ಕೈಯೆತ್ತಿ ಸಿಟ್ಟಿಗೆದ್ದಿದ್ದ ಅವರನ್ನು ತಡೆದು ‘ಜಸ್ಟ್ ಎ ಮಿನಿಟ್ ಸಾರ್, ನಾನು ಓದಿ ಹೇಳಲೇ?’ ಎಂದು ಅವರಿತ್ತ ಪತ್ರಿಕೆಯನ್ನೆತ್ತಿಕೊಂಡು ಓದತೊಡಗಿದ.

ಅಂದಿನ ಮುಖ್ಯ ಸುದ್ದಿ ಕಣ್ಣಿಗೆ ರಾಚುವಂತಾ ತಲೆಬರಹದಲ್ಲಿದ್ದುದು–

‘ಕೋಟ್ಯಾಧೀಶ್ವರಿಯ ನಿಗೂಢ ಸಾವು: ಅಂಚನಾ ದೇಸಾಯಿ ನೀರಲ್ಲಿ ಮುಳುಗಿದ್ದೇಕೆ?’